ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ**

ಲಲಿತಮಹಲ್ ರಸ್ತೆ, ಮೈಸೂರು–570 011 ದೂ:0821–2522901/906 ಇ–ಮೇಲ್: sird-mysuru@ka.gov.in

# "ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ"

## ಸಿದ್ಧತೆ ಕುರಿತು ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳಿಗೆ 3 ದಿನಗಳ ಮುಖಾಮುಖಿ ತರಬೇತಿ

## ತರಬೇತುದಾರರ ತರಬೇತಿ ಮಾರ್ಗಸೂಚಿ

**ತರಬೇತಿ ವಿನ್ಯಾಸ**

**ದೀಪ ಎನ್, ಸಂಶೋಧನಾಧಿಕಾರಿ**

**ಜಿ. ಮಲ್ಲಿಕಾರ್ಜುನ ಸ್ವಾಮಿ**

**ಡಾ. ಜಿ.ಎಸ್ ಗಣೇಶ್ ಪ್ರಸಾದ್**

**ತರಬೇತಿ ಸಹಾಯಕರು**

**ಶ್ರೀಮತಿ. ಶೀಲಾ**

**"ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ" ಸಿದ್ಧತೆ ಕುರಿತು ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳಿಗೆ ತರಬೇತಿ ಕಾರ್ಯಕ್ರಮ**

**ಹಿನ್ನೆಲೆ:**

ಭಾರತವು ಸ್ವಾತಂತ್ರ್ಯ ಪಡೆದು 75 ವರ್ಷಗಳನ್ನು ಪೂರೈಸುತ್ತಿರುವುದು ಹರ್ಷದ ಸಂಗತಿಯಾಗಿದೆ. ಹಳ್ಳಿಗಳನ್ನು ಅಭಿವೃದ್ಧಿ ಹೊಂದಿದ ಗ್ರಾಮಗಳನ್ನಾಗಿ ಮಾಡುವ ನಿಟ್ಟಿನಲ್ಲಿ ಸ್ಥಳೀಯ ಸರ್ಕಾರಗಳಾದ ಗ್ರಾಮ ಪಂಚಾಯಿತಿಗಳು ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಕಾರ ಮತ್ತು ಅನುದಾನದೊಂದಿಗೆ ನಿರಂತರವಾಗಿ ಪ್ರಯತ್ನಿಸುತ್ತಿದೆ. ಆದಾಗ್ಯೂ ಗ್ರಾಮದ ಅಭಿವೃದ್ಧಿಗಾಗಿ ಯೋಜನೆಗಳನ್ನು ಸಿದ್ದಪಡಿಸುವ ಸಂದರ್ಭದಲ್ಲಿ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಮಾತ್ರ ಭಾಗವಹಿಸುತ್ತಾರೆ ಮತ್ತು ಈ ಅಭಿವೃದ್ಧಿಯು ಹೆಚ್ಚಿನದಾಗಿ ಮೂಲ ಸೌಕರ್ಯಗಳಿಗೆ ಸೀಮಿತವಾಗಿದ್ದು, ಸಮಾಜದಲ್ಲಿ ವಾಸಿಸುವ ಜನರು ಎದುರಿಸುವ ಸಮಸ್ಯೆಗಳು ಮತ್ತು ಅವುಗಳಿಗೆ ಪರಿಹಾರವನ್ನು ಹುಡುಕಲು ಸಾಧ್ಯವಾಗುತ್ತಿಲ್ಲ ಎಂಬ ಅಭಿಪ್ರಾಯ ಸಾಮಾನ್ಯವಾಗಿದೆ.

ಬಹುತೇಕ ಸಂದರ್ಭಗಳಲ್ಲಿ ಜನರ ಜೀವನವನ್ನು ಉತ್ತಮಪಡಿಸಲು ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಯೋಜನೆಗಳನ್ನು ರೂಪಿಸಿ ಅನುಷ್ಠಾನ ಮಾಡಿದಾಗಲು ಸಾರ್ವಜನಿಕರು ಯೋಜನೆಗಳ ಉಪಯುಕ್ತತೆಯ ಬಗ್ಗೆ ಮತ್ತು ಯೋಜನೆಯ ಅನುಷ್ಠಾನದ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಾರೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಂದ ಅವರ ಬೇಡಿಕೆಗಳನ್ನು ಪಡೆದು ಅವುಗಳನ್ನು ಯೋಜನೆಯ ಭಾಗವನ್ನಾಗಿಸಿ, ಅನುಷ್ಠಾನಿಸುವ ಮೇಲ್ವಿಚಾರಣೆ ಮಾಡುವ ಮತ್ತು ಮೌಲ್ಯಮಾಪನ ಮಾಡುವ ಚಟುವಟಿಕೆಗಳಲ್ಲಿ ಜನರ ಭಾಗವಹಿಸುವಿಕೆಯನ್ನು ಖಾತರಿಪಡಿಸುವುದಾಗಿದೆ.

ಜನರ ಅಗತ್ಯತೆಗಳನ್ನು ಸಂಗ್ರಹಿಸುವ ಮತ್ತು ಅವುಗಳನ್ನು ಅನುಷ್ಠಾನಗೊಳಿಸಿ ಉತ್ತರಿಸುವ ಹೊಣೆಗಾರಿಕೆಯು ಗ್ರಾಮಸಭೆಗಳಿಗಿದೆ. ಗ್ರಾಮ ಪಂಚಾಯಿತಿ ಮಿತಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಅಭಿವೃದ್ಧಿ ಇಲಾಖೆ ಮತ್ತು ಅನುಷ್ಠಾನ ಇಲಾಖೆಗಳಿಂದ ಮಾಹಿತಿಯನ್ನು ಸಂಗ್ರಹಿಸುವುದು. ಸಂಗ್ರಹಿಸಿದ ಮಾಹಿತಿಯಲ್ಲಿ ಇರುವ ಮಿತಿಗಳನ್ನು ಹೋಗಲಾಡಿಸಲು ಪಂಚಾಯಿತಿಯು ಯೋಜನೆಗಳನ್ನು ರೂಪಿಸಬೇಕಾಗಿದೆ. ಈ ಚಟುವಟಿಕೆಯಲ್ಲಿ ಸಾರ್ವಜನಿಕರು ಭಾಗವಹಿಸಿಬೇಕಾಗಿದ್ದು, ಸಾರ್ವಜನಿಕರು ನೀಡಿದ ಬೇಡಿಕೆಗಳನ್ನು ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸಂಗ್ರಹಿಸಿ, ಅವುಗಳನ್ನು ಮುಂದಿನ 5 ವರ್ಷದ ಗುರಿಗಳನ್ನಾಗಿ ರೂಪಿಸುವುದನ್ನು ಗ್ರಾಮ ಪಂಚಾಯಿತಿಯ ದೂರದೃಷ್ಟಿ ಯೋಜನೆಯೆಂದು ಕರೆಯುತ್ತೇವೆ. ಈ ಸಂಬಂಧ ತರಬೇತಿಯನ್ನು ವಿನ್ಯಾಸಗೊಳಿಸಲಾಗಿದೆ.

**ತರಬೇತಿ ಉದ್ದೇಶ:**

ತರಬೇತಿ ಕಾರ್ಯಕ್ರಮದ ಅಂತ್ಯದಲ್ಲಿ ಪ್ರಶಿಕ್ಷಣಾರ್ಥಿಯು

1. ಗ್ರಾಮ ಪಂಚಾಯಿತಿ ಹಂತದಲ್ಲಿ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸುವ ಮಹತ್ವದ ಕುರಿತು ವಿವರಿಸುವರು
2. ಗ್ರಾಮ ಪಂಚಾಯಿತಿ ಹಂತದಲ್ಲಿ ಸಮಾಜದ ಪ್ರತಿಯೊಂದು ವರ್ಗದ, ಸಮುದಾಯದ ಜನರ ಬೇಡಿಕೆಗಳು ಮತ್ತು ಅಗತ್ಯತೆಗಳನ್ನು ಪಟ್ಟಿಮಾಡುವರು
3. ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಯಕರಣದ ಮಹತ್ವದ ಆಧಾರದಲ್ಲಿ ಯೋಜನೆಗಳನ್ನು 9 ವಲಯಗಳಲ್ಲಿ ಮತ್ತು 8 ವಿಭಾಗಗಳಲ್ಲಿ ಸಿದ್ಧಪಡಿಸುವರು.
4. ಯೋಜನೆಯ 8 ವಿಭಾಗಗಳಲ್ಲಿ ನೀಡಲಾಗಿರುವ ಸಮಸ್ಯೆಗಳು/ಅಂಶಗಳ ಮಾದರಿ ನಮೂನೆಗಳನ್ನು ಬಳಸಿ ಸಮಸ್ಯೆಗಳನ್ನು ಅರ್ಥೈಸಿಕೊಂಡು ಪಟ್ಟಿಮಾಡುವರು
5. ಗ್ರಾಮ ಪಂಚಾಯಿತಿ ಮಟ್ಟದ 5 ವರ್ಷಗಳ ದೂರದೃಷ್ಟಿಯನ್ನು ಸಿದ್ಧಪಡಿಸುವರು ಮತ್ತು ದೂರದೃಷ್ಟಿ ಯೋಜನೆಯ ಮಹತ್ವವನ್ನು ವಿವರಿಸುವರು.

**ಪ್ರಶಿಕ್ಷಣಾರ್ಥಿಗಳು:**

| **ಕ್ರಮ ಸಂಖ್ಯೆ** | **ಉದ್ದೇಶಿತ ಗುಂಪು** | **ಸಂಖ್ಯೆ** | **ಗ್ರಾಮ ಪಂಚಾಯತಿ / ಹೋಬಳಿಗಳ ಸಂಖ್ಯೆ** | **ಒಟ್ಟು ಸಂಖ್ಯೆ** |
|---|---|---|---|---|
| 1. | ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳು (ಅಧ್ಯಕ್ಷರು & ಉಪಾಧ್ಯಕ್ಷರನ್ನು ಒಳಗೊಂಡಂತೆ ) | 92000 | ಸಾಮರ್ಥ್ಯ ಸೌಧ ತಾಲ್ಲೂಕು ಪಂಚಾಯಿತಿ | 92000 |
| 2. | ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ | 6000 | ಸಾಮರ್ಥ್ಯ ಸೌಧ ತಾಲ್ಲೂಕು ಪಂಚಾಯಿತಿ | 6000 |
| 3. | ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು | 6000 | ಸಾಮರ್ಥ್ಯ ಸೌಧ ತಾಲ್ಲೂಕು ಪಂಚಾಯಿತಿ | 6000 |
| | ಒಟ್ಟು | 1,04,000 | | 1,04,000 |

**ತರಬೇತಿ ವಿಷಯಗಳು:–**

1. ಅಭಿವೃದ್ಧಿಯ ಪರಿಕಲ್ಪನೆ, ಮಾನವ ಅಭಿವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಸ್ಥಳೀಕರಣ
2. ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ– ಪರಿಚಯ ಮತ್ತು ಸಿದ್ಧಪಡಿಸುವ ಹಂತಗಳು
3. ಗ್ರಾಮೀಣ ಸಹಭಾಗಿ ಪರಾಮರ್ಶೆ– ಸಾಮಾಜಿಕ ನಕ್ಷೆ ಮತ್ತು ಸಂಪನ್ಮೂಲ ನಕ್ಷೆ ಪರಿಚಯ ಮತ್ತು ಸಿದ್ಧಪಡಿಸುವಿಕೆ
4. ದೂರದೃಷ್ಟಿ ಯೋಜನೆ ನಮೂನೆಗಳ ಪರಿಚಯ
5. ಶಿಕ್ಷಣ ವಲಯ

6. ಆರೋಗ್ಯ ವಲಯ
7. ಮಹಿಳೆಯರ ಅಭಿವೃದ್ಧಿ
8. ಮಕ್ಕಳ ಅಭಿವೃದ್ಧಿ
9. ಜಲ ಸಮೃದ್ಧಿ ಗ್ರಾಮ ಪಂಚಾಯಿತಿ ಯೋಜನೆ
10. ಸ್ವಚ್ಛ ಮತ್ತು ಹಸಿರು ಗ್ರಾಮ ಪಂಚಾಯಿತಿ
11. ಸಾಮಾಜಿಕ ಸುರಕ್ಷಿತ ಗ್ರಾಮ ಪಂಚಾಯಿತಿ
12. ಬಡತನ ಮುಕ್ತ, ಜೀವನೋಪಾಯ ಮತ್ತು ಕೌಶಲ್ಯಾಭಿವೃದ್ಧಿ
13. ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಕ್ರೋಢೀಕರಣ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಯೊಂದಿಗೆ ಸಂಯೋಜನೆ

**ತರಬೇತಿ ನಿರೀಕ್ಷಿತ ಫಲಿತಾಂಶ**

1. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಯೋಜನಾ ಸಹಾಯಕ ಸಮಿತಿಯನ್ನು ರಚಿಸುವರು ಮತ್ತು ಅಗತ್ಯ ಮಾಹಿತಿಗಳನ್ನು ಸಂಗ್ರಹಿಸಲು ಕ್ರಮ ವಹಿಸುವರು
2. ಗ್ರಾಮ ಪಂಚಾಯಿತಿ ಮಟ್ಟದ ದೂರದೃಷ್ಟಿ ಯೋಜನೆಯನ್ನು ಸಿದ್ದಪಡಿಸುವ ಹತ್ತು ಹಂತಗಳನ್ನು ಅಳವಡಿಸಿಕೊಂಡು 5 ವರ್ಷದ ಯೋಜನೆಯನ್ನು ಸಿದ್ಧಪಡಿಸುವರು
3. ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆಯನ್ನು ಇಲಾಖೆಯ ತಂತ್ರಾಂಶ ಪಂಚತಂತ್ರ 2.0 ನಲ್ಲಿ ಅಳವಡಿಸುವುದು.
4. ಪ್ರತಿ ವರ್ಷದ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ದೂರದೃಷ್ಟಿ ಯೋಜನೆಯಲ್ಲಿರುವ ವಿಷಯಗಳು ಮತ್ತು ಚಟುವಟಿಕೆಗಳಿಂದಲೇ ಆಯ್ಕೆ ಮಾಡಿಕೊಳ್ಳುವುದು.

**ತರಬೇತಿ ಸಂಯೋಜಕರು ಮತ್ತು ಸಹಾಯಕರು**

1. ದೀಪ ಎನ್, ಸಂಶೋಧನಾಧಿಕಾರಿಗಳು
2. ಜಿ. ಮಲ್ಲಿಕಾರ್ಜುನ ಸ್ವಾಮಿ
3. ಡಾ. ಜಿ.ಎಸ್ ಗಣೇಶ್ ಪ್ರಸಾದ್
4. ಶ್ರೀಮತಿ. ಶೀಲಾ, ತರಬೇತಿ ಸಹಾಯಕರು.

**ತರಬೇತಿ ವಿನ್ಯಾಸ:**

**ಸುಗಮಗಾರರುಗಳ ಪೂರ್ವ ಸಿದ್ಧತೆ ಹಂತ**

ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ತರಬೇತಿ ಕಾರ್ಯಕ್ರಮವು 3 ದಿನಗಳ ಮುಖಾ-ಮುಖಿ ತರಬೇತಿ ಕಾರ್ಯಕ್ರಮವಾಗಿದ್ದು, ತರಬೇತಿಯನ್ನು ಯಶಸ್ವಿಗೊಳಿಸುವ ಹಿನ್ನೆಲೆಯಲ್ಲಿ ತಾಲ್ಲೂಕು ಪಂಚಾಯಿತಿಯೊಂದಿಗೆ ಸಮನ್ವಯ ಸಾಧಿಸಿ, ಎಲ್ಲಾ ಗ್ರಾಮ ಪಂಚಾಯಿತಿಯ ಚುನಾಯಿತ ಪ್ರತಿನಿಧಿಗಳು, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿಗಳು ಕಡ್ಡಾಯವಾಗಿ ತರಬೇತಿಯಲ್ಲಿ ಹಾಜರಾಗುವಂತೆ ಕ್ರಮ ವಹಿಸುವುದು.

ತಾಲ್ಲೂಕು ಪಂಚಾಯಿತಿಯ ಸಾಮರ್ಥ್ಯ ಸೌಧದಲ್ಲಿ ತರಬೇತಿಗೆ ಅಗತ್ಯ ಪೂರ್ವ ಸಿದ್ದತೆಗಳು ನಡೆದಿರುವ ಕುರಿತು ತರಬೇತಿಯ ಹಿಂದಿನ ದಿನ ಭೇಟಿ ನೀಡಿ ಪರಿಶೀಲಿಸುವುದು. ತರಬೇತಿಗೆ ಅಗತ್ಯವಿರುವ ಪೂರಕ ಸಾಮಗ್ರಿಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು.

ಪರಿಚಯಾತ್ಮಕ ಚಟುವಟಿಕೆಗೆ ಅಗತ್ಯವಿರುವ ಜೋಡಿ ಚೀಟಿಗಳು, ಪ್ರಾಣಿಗಳು, ಹೂ, ಪ್ರಸಿದ್ಧ ಸ್ಥಳಗಳು, ಖ್ಯಾತ ನಾಮರುಗಳ ಹೆಸರುಗಳನ್ನು ಮತ್ತು ಸಾಧನೆಯ ಕ್ಷೇತ್ರಗಳ ಹೆಸರುಗಳನ್ನು ಬರೆದು ಒಟ್ಟು 25 ಜೋಡಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು.

ಸಂಸ್ಥೆಯು ಗೂಗಲ್ ಡ್ರೈವಿನಲ್ಲಿ ಅಪ್ ಲೋಡ್ ಮಾಡಲಾಗಿರುವ ವಿಡಿಯೋಗಳನ್ನು ತರಬೇತಿ ಕೇಂದ್ರದಲ್ಲಿರುವ ಕಂಪ್ಯೂಟರ್‌ನಲ್ಲಿ ಡೌನ್ ಲೋಡ್ ಮಾಡಿಕೊಂಡು, ವಿಡಿಯೋಗಳನ್ನು ಅಧಿವೇಶನವಾರು ಪ್ರತ್ಯೇಕವಾಗಿ ಪೋಲ್ಡರ್ ನಲ್ಲಿ ಗುರುತಿಸಲು ಸುಲಭವಾಗುವಂತೆ ಶೇಖರಿಸಿಟ್ಟುಕೊಳ್ಳುವುದು

ಎರಡನೇ ಮತ್ತು ಮೂರನೇ ದಿನಗಳು ಹಿಂದಿನ ದಿನದ ತರಬೇತಿಯಲ್ಲಿ ಕಲಿತ ಅಂಶಗಳ ಬಗ್ಗೆ ಪ್ರಶಿಕ್ಷಣಾರ್ಥಿಗಳಿಂದ ಹಿಮ್ಮಾಹಿತಿ ಪಡೆಯಲು ಚಟುವಟಿಕೆಗಳನ್ನು ಗುರುತಿಸಿಟ್ಟುಕೊಳ್ಳುವುದು.

**ತರಬೇತಿಯ ಮೊದಲ ದಿನ**

- ತರಬೇತಿಯಗಳ ದಿನದಂದು ಸುಗಮಗಾರರು ಬೆಳಿಗ್ಗೆ 09.30 ಕ್ಕೆ ತರಬೇತಿ ಕೇಂದ್ರದಲ್ಲಿ ಉಪಸ್ಥಿತರುವುದು
- ತರಬೇತಿಗೆ ಆಗಮಿಸುವ ಪ್ರಶಿಕ್ಷಣಾರ್ಥಿಗಳನ್ನು 10.00 ಘಂಟೆಯಿಂದ ನೊಂದಣಿ ಮಾಡಿಕೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡುವುದು.
- ತರಬೇತಿ ಕಾರ್ಯಕ್ರಮದ ಉದ್ಘಾಟನಾ ಕಾರ್ಯಕ್ರಮವನ್ನು ರಾಜ್ಯ ಮಟ್ಟದ ಅಧಿಕಾರಿಗಳು ಸಮಯ 11.00 ರಿಂದ 12.15 ರವರೆಗೆ ಉದ್ಘಾಟಿಸುವರು.

**ಪರಿಚಯಾತ್ಮಕ ಚಟುವಟಿಕೆ**

ಉದ್ಘಾಟನಾ ಸಮಾರಂಭದ ನಂತರ ತರಬೇತಿಗೆ ಆಗಮಿಸಿರುವ ಮಹಿಳಾ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಗಳ ಪರಿಚಯ ಮಾಡಿಸುವ ಚಟುವಟಿಕೆಗೆ ಚಾಲನೆ ನೀಡುವುದು

**ಆಟದ ಮೂಲಕ ಪರಿಚಯಾತ್ಮಕ ಚಟುವಟಿಕೆ**

ಆಗಮಿಸಿರುವ ಪ್ರಶಿಕ್ಷಣಾರ್ಥಿಗಳನ್ನು ಎರಡು ತಂಡವಾಗಿ ರಚಿಸಿ, ಒಂದು ತಂಡವು ಒಳಭಾಗದಲ್ಲಿ ಮತ್ತೊಂದು ತಂಡವು ಮೊದಲ ತಂಡದ ಹೊರಬಾಗದಲ್ಲಿ ವೃತ್ತಾಕಾರವಾಗಿ ನಿಲ್ಲುವುದು.

**ಚಟುವಟಿಕೆ –01**

- ವೃತ್ತಾಕಾರವಾಗಿ ನಿಂತಿರುವ ಪ್ರಶಿಕ್ಷಣಾರ್ಥಿಗಳು ಒಳತಂಡದವರು ಮತ್ತು ಹೊರತಂಡದವರು ವಿರುದ್ಧ ದಿಕ್ಕಿನಲ್ಲಿ ವೃತ್ತಾಕಾರವಾಗಿ ಚಲಿಸುವುದು.
- ಸಂಯೋಜಕರು ಚಪ್ಪಾಳೆ ತಟ್ಟಿದಾಗ ಎದುರಿಗೆ ವೃತ್ತದಲ್ಲಿಯೇ ನಿಲ್ಲುವುದು ಮತ್ತು ಮತ್ತೊಂದು ವೃತ್ತದ ಪ್ರಶಿಕ್ಷಣಾರ್ಥಿಗಳಿಗೆ ಎದುರಾಗಿ ನಿಂತು ಪರಿಚಯ ಮಾಡಿಕೊಳ್ಳುವುದು.
- ಪರಿಚಯದ ಸಂದರ್ಭದಲ್ಲಿ, ಪ್ರಶಿಕ್ಷಣಾರ್ಥಿಯು ಅವರ ಹೆಸರು, ಗ್ರಾಮ, ಗ್ರಾಮ ಪಂಚಾಯಿತಿ, ಹುದ್ದೆ, ಶಿಕ್ಷಣ, ರಾಜಕೀಯ ಅನುಭವದ ಬಗ್ಗೆ ತಿಳಿಸುವುದು.
- ಒಂದು ಸುತ್ತಿನ ಪರಿಚಯದ ನಂತರ ಮತ್ತೊಮ್ಮೆ ವೃತ್ತಾಕಾರದಲ್ಲಿ ವಿರುದ್ದು ದಿಕ್ಕಿನಲ್ಲಿ ಮತ್ತೊಮ್ಮೆ ಚಲಿಸುವುದು. ಚಪ್ಪಾಳೆ ತಟ್ಟಿದ ನಂತರ ತಮ್ಮ ಎದುರಿಗೆ ನಿಂತಿರುವವರನ್ನು ಪರಿಚಯ ಮಾಡಿಕೊಳ್ಳುವುದು. ಎಲ್ಲರೂ ಎಲ್ಲರಿಗೂ ಪರಿಚಯವಾಗುದ ನಂತರ ತರಬೇತಿಗೆ ತೆರಳುವುದು.

**ಚಟುವಟಿಕೆ –02**

ತರಬೇತಿ ಕೇಂದ್ರದ ಒಳಗೆ ಪರಿಚಯಾತ್ಮಕ ಚಟುವಟಿಕೆಯನ್ನು ಮಾಡಿಸುವಂತಹ ಸಂದರ್ಭದಲ್ಲಿ

- ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವ್ಯಕ್ತಿಗಳ ಹೆಸರು ಮತ್ತು ಕ್ಷೇತ್ರ, ಪ್ರಸಿದ್ಧ ಸ್ಥಳಗಳು ಮತ್ತು ಅದರ ವಿಶೇಷತೆ, ಮುಂತಾದ ವಿಷಯಗಳ ಕುರಿತು 25 ಜೋಡಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು
- ತರಬೇತಿಗೆ ಆಗಮನಿಸಿದ ಪ್ರಶಿಕ್ಷಣಾರ್ಥಿಗಳ ಸಂಖ್ಯೆಯನ್ನು ಆಧರಿಸಿ, ಚೀಟಿಗಳನ್ನು ಮೇಜಿನ ಮೇಲಿಟ್ಟು ಎಲ್ಲರು ಒಂದು ಚೀಟಿಯನ್ನು ಎತ್ತಿಕೊಳ್ಳುವಂತೆ ತಿಳಿಸುವುದು
- ಚೀಟಿಯನ್ನು ಎತ್ತಿಕೊಂಡ ನಂತರ ಅವರಿಗೆ ಬಂದಿರುವ ವಿಷಯದ ಆಧಾರದಲ್ಲಿ ಅದರ ಜೋಡಿಗಳನ್ನು ಗುರುತಿಸುವಂತೆ ತಿಳಿಸುವುದು
- ಪ್ರಶಿಕ್ಷಣಾರ್ಥಿಗಳು ಜೋಡಿಯನ್ನು ಗುರುತಿಸಿದ ನಂತರ ಒಬ್ಬರು ಮತ್ತೊಬ್ಬರನ್ನು ಪರಿಚಯವನ್ನು ಮಾಡಿಕೊಳ್ಳುವಂತೆ ತಿಳಿಸುವುದು

- ಪರಿಚಯ ಮಾಡಿಕೊಡುವ ಸಂದರ್ಭದಲ್ಲಿ, ತಮ್ಮ ಸಹಚರರ ಹೆಸರು, ಗ್ರಾಮ, ಗ್ರಾಮ ಪಂಚಾಯಿತಿಯ ಹೆಸರು, ರಾಜಕೀಯದ ಅನುಭವದ ಬಗ್ಗೆ ಪರಿಚಯಿಸುವುದು
- ಈ ಚಟುವಟಿಕೆ ಎಲ್ಲರ ಪರಿಚಯವಾಗುವವರೆವಿಗೂ ನಡೆಯುತ್ತದೆ.

ಪರಿಚಯಾತ್ಮಕ ಚಟುವಟಿಕೆ ಮುಗಿದ ನಂತರ ತರಬೇತಿಯನ್ನು ಒಳಾಂಗಣಕ್ಕೆ ವರ್ಗಾಯಿಸುವುದು.

**ತರಬೇತಿಗೆ ಸಂಬಂಧಿಸಿದಂತೆ ತರಬೇತಿಯ ಹೆಸರು ಮತ್ತು ತರಬೇತಿಯ ಉದ್ದೇಶದ ಬಗ್ಗೆ ಪ್ರಶಿಕ್ಷಣಾರ್ಥಿಗಳಿಗೆ ಪರಿಚಯ ಮಾಡಿಕೊಡುವುದು.** ಮತ್ತು ಮೊದಲ ಅಧಿವೇಶನವು ಸಮಯ 01.00 ಗಂಟೆಗೆ ಪ್ರಾರಂಭವಾಗುತ್ತಿದ್ದು ಎಲ್ಲರೂ ತಜ್ಞ ಸಂಪನ್ಮೂಲ ವ್ಯಕ್ತಿಗಳು ತಿಳಿಸುವ ವಿವರವನ್ನು ಗಮನಿಸೋಣ ಎಂದು ತಿಳಿಸುವುದು.

| | |
|---|---|
| ಅಧಿವೇಶನ ಸಂಖ್ಯೆ | 1 |
| ವಿಷಯ | **ಅಭಿವೃದ್ಧಿಯ ಪರಿಕಲ್ಪನೆ, ಮಾನವ ಅಭಿವೃದ್ಧಿ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಸ್ಥಳೀಕರಣ** |
| ಉಪ ವಿಷಯ | - ಅಭಿವೃದ್ಧಿ ಪರಿಕಲ್ಪನೆಯ ಪರಿಚಯ<br>- ಮಾನವ ಅಭಿವೃದ್ಧಿ ಸೂಚ್ಯಾಂಕಗಳ ಕಿರು ಪರಿಚಯ<br>- ಸುಸ್ಥಿರ ಅಭಿವೃದ್ಧಿ ಗುರಿಗಳು<br>- ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣ<br>- ಕರ್ನಾಟಕದಲ್ಲಿ ದೂರದೃಷ್ಟಿ ಯೋಜನೆ ಮತ್ತು ಸುಸ್ಥಿರ ಗುರಿಗಳ ಸ್ಥಳೀಕರಣ ಸಮನ್ವಯತೆ |
| ಉದ್ದೇಶ | ಪ್ರಶಿಕ್ಷಣಾರ್ಥಿಗಳು ಅಭಿವೃದ್ಧಿ ಪರಿಕಲ್ಪನೆಯು ವಿಕಸನಗೊಂಡ ರೀತಿ ಮತ್ತು ಪ್ರಸ್ತುತ ಅಸ್ತಿತ್ವದಲ್ಲಿರುವ ಸುಸ್ಥಿರ ಅಭಿವೃದ್ಧಿ ಗುರಿಗಳ ಮಹತ್ವದ ಕುರಿತು ವಿವರಿಸುವರು. |
| ವಿಧಾನ | ವಿಷಯ ಮಂಡನೆ |
| ಸಮಯ | 30 ನಿಮಿಷಗಳು |
| ಪೂರಕ ಸಾಮಗ್ರಿ | ಸಂಪನ್ಮೂಲ ವ್ಯಕ್ತಿಗಳ ಮುದ್ರಿತ ವಿಡಿಯೋ, ಪಿಪಿಟಿ, ವೈಟ್ ಬೋರ್ಡ್, ವೈಟ್ ಬೋರ್ಡ್ ಮಾರ್ಕರ್, |
| ಪ್ರಕ್ರಿಯೆ | • ತರಬೇತಿ ಕೇಂದ್ರದಲ್ಲಿ ಸ್ಥಳೀಯವಾಗಿ ತರಬೇತಿಯಲ್ಲಿ ಗ್ರಾಮ ಪಂಚಾಯಿತಿಯ ಸದಸ್ಯರಾದ ತಾವುಗಳು ಯಾವ ಉದ್ದೇಶದಿಂದ ಸಾರ್ವಜನಿಕ ಜೀವನಕ್ಕೆ ಬಂದಿರುವಿರು ಎಂದು ಪ್ರಶ್ನಿಸುವುದು.<br>• ಗ್ರಾಮಗಳ ಅಭಿವೃದ್ದಿ, ಜನ ಸೇವೆ ಎಂದು ಉತ್ತರಿಸಿದಾಗ ಹಾಗಾದರೆ ಅಭಿವೃದ್ದಿ ಎಂದರೇನು ಎಂದು ಪ್ರಶ್ನಿಸುವುದು |

| | |
|---|---|
| | • ಪ್ರಶಿಕ್ಷಣಾರ್ಥಿಗಳು ನೀಡುವ ವಿವರಣೆಗಳನ್ನು ಬೋರ್ಡಿನಲ್ಲಿ ಮೂಲ ಸೌಕರ್ಯಗಳು ಮತ್ತು ಜೀವನವನ್ನು ಸುಧಾರಿಸುವ ಚಟುವಟಿಕೆಗಳ ಕುರಿತ ವಿಷಯಗಳನ್ನು ಪ್ರತ್ಯೇಕವಾಗಿ ದಾಖಲಿಸುವುದು<br>• ಪಟ್ಟಿಯಲ್ಲಿರುವ ವಿಷಯಗಳಲ್ಲಿ ಮಾನವ ಅಭಿವೃದ್ಧಿಗೆ ಪೂರಕವಾದ ವಿಷಯಗಳು ಮತ್ತು ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಪ್ರಶಿಕ್ಷಣಾರ್ಥಿಗಳಿಂದ ಮಾಹಿತಿ ಪಡೆಯುವುದು<br>• ತಜ್ಞ ಸಂಪನ್ಮೂಲ ವ್ಯಕ್ತಿಗಳು ನೀಡಿರುವ ಮಾಹಿತಿಯ 20 ನಿಮಿಷಗಳ ವಿಡಿಯೋ ವೀಕ್ಷಣೆ ಮಾಡುವುದು.<br>• ಅಧಿವೇಶನಕ್ಕೆ ಸಂಬಂಧಿಸಿದಂತೆ ಹಿಮ್ಮಾಹಿತಿ ಪಡೆದುಕೊಳ್ಳುವುದು<br>• ಅಧಿವೇಶನಕ್ಕೆ ಸಂಬಂಧಿಸಿದಂತೆ ಮೂಡುವ ಪ್ರಶ್ನೆಗಳಿಗೆ ಉತ್ತರಿಸುವುದು. ಕೆಲವೊಮ್ಮೆ ಪ್ರಶ್ನೆಗಳಿಗೆ ಉತ್ತರಿಸಲಾಗದಿದ್ದಲ್ಲಿ, ಪ್ರಶ್ನೆಗಳನ್ನು ಸಂಸ್ಥೆಯ ಬೋಧಕರುಗಳಿಗೆ ವರ್ಗಾಯಿಸುವುದು.<br>• ದಿನದ ಮೊದಲ ಅಧಿವೇಶನ ಮುಕ್ತಾಯಗೊಂಡ ನಂತರ ಊಟದ ವಿರಾಮವನ್ನು ತಿಳಿಸಿ ಎಲ್ಲರೂ 02.15 ಕ್ಕೆ ತರಗತಿಗೆ ಹಾಜರಾಗುವಂತೆ ತಿಳಿಸಿ ಅಧಿವೇಶನ ಮುಕ್ತಾಯಗೊಳಿಸುವುದು. |
| ನಿರೀಕ್ಷಿತ ಫಲಿತಾಂಶ | ಪ್ರಶಿಕ್ಷಣಾರ್ಥಿಗಳು ಗ್ರಾಮಗಳನ್ನು ಅಭಿವೃದ್ಧಿ ಪಡಿಸುವ ದೃಷ್ಟಿಕೋನವನ್ನು ಬದಲಿಸಿ ಮೂಲ ಸೌಕರ್ಯಗಳ ಜೊತೆಗೆ, ಸಾಮಾಜಿಕ ಅಂಶಗಳನ್ನು ಪರಿಗಣಿಸುವರು ಮತ್ತು ಪಟ್ಟಿಮಾಡುವರು |

| **ಅಧಿವೇಶನ–2** | |
|---|---|
| **ವಿಷಯ** | **ಗ್ರಾಮ ಪಂಚಾಯಿತಿಯ ದೂರದೃಷ್ಟಿ ಯೋಜನೆ– ಪರಿಚಯ, ಸಿದ್ಧಪಡಿಸುವ ಹಂತಗಳು** |
| **ಉಪವಿಷಯ** | • ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ – ಅವಶ್ಯಕತೆ ಮತ್ತು ಪ್ರಸ್ತುತತೆ<br>• ದೂರದೃಷ್ಟಿ ಯೋಜನೆ ಸಿದ್ದಪಡಿಸುವ 10 ಹಂತಗಳ ಪರಿಚಯ<br>• ಗ್ರಾಮ ಯೋಜನಾ ಸಮಿತಿಯಿಂದ – ಪಂಚತಂತ್ರ 2.0 ಗೆ ಇಂದೀಕರಸುವ ಪ್ರಕ್ರಿಯೆಯ ಹಂತಗಳ ವಿವರಣೆ |
| **ಉದ್ದೇಶ** | ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆಯ ಮಹತ್ವ ಮತ್ತು ಯೋಜನಾ ಪ್ರಕ್ರಿಯೆಯ 10 ಹಂತಗಳನ್ನು ವಿವರಿಸುವರು. |
| **ಸಮಯ** | **30 ನಿಮಿಷಗಳು** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |

| | |
|---|---|
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಅಧಿವೇಶನ ಪ್ರಾರಂಭದಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ದೂರದೃಷ್ಟಿ ಎಂಬ ಪದವನ್ನು ಕೇಳಿದ್ದೀರ ಎಂದು ಪ್ರಶ್ನಿಸುವುದು, ಅವರಿಂದ ಹೌದು ಅಥವಾ ಇಲ್ಲ ಎಂದು ಉತ್ತರ ಬರುತ್ತದೆ. ಹಾಗಾದಲ್ಲಿ ದೂರದೃಷ್ಟಿ ಎಂದರೇನು ಎಂದು ಪ್ರಶ್ನಿಸುವುದು?<br>• ಗ್ರಾಮ ಪಂಚಾಯಿತಿಯು ದೂರದೃಷ್ಟಿ ಹೊಂದುವುದು ಅವಶ್ಯವಿದೆಯೇ ಎಂದಾದರೆ ಯಾವೆಲ್ಲಾ ಕಾರಣಗಳಿಗಾಗಿ ಯೋಜನೆ ಸಿದ್ಧಪಡಿಸಬೇಕೆಂದು ಪ್ರಶ್ನಿಸುವುದು.<br>• ಪ್ರಶಿಕ್ಷಣಾರ್ಥಿಗಳಿಂದ ಬರುವ ಉತ್ತರವನ್ನು ದಾಖಲಿಸಿಕೊಳ್ಳುವುದು.<br>• ಅಭಿವೃದ್ಧಿಯನ್ನು ಸಾಧಿಸುವ ದೃಷ್ಟಿಯಿಂದ ದೂರದೃಷ್ಟಿ ಯೋಜನೆ ಅವಶ್ಯವೆನ್ನುವುದನ್ನು ತಿಳಿಸುವುದು<br>• ವಿಷಯಕ್ಕೆ ಸಂಬಂಧಿಸಿದಂತೆ ತಜ್ಞ ಸಂಪನ್ಮೂಲ ವ್ಯಕ್ತಿಗಳು ನೀಡಿರುವ ಮಾಹಿತಿಯ ವಿಡಿಯೋವನ್ನು ಪ್ರಸರಣ ಮಾಡುವುದು<br>• ತದನಂತರ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸುವ 10 ಹಂತಗಳ ಕುರಿತ ಅನಿಮೇಟೆಡ್ ವಿಡಿಯೋ ವೀಕ್ಷಣೆ ಮಾಡುವುದು (5 ನಿಮಿಷ)<br>• ತಜ್ಞ ಸಂಪನ್ಮೂಲ ವ್ಯಕ್ತಿಗಳು ಮಂಡಿಸುವ ವಿಷಯವನ್ನು ವೀಕ್ಷಿಸುವುದು (20 ನಿಮಿಷಗಳು)<br>• ಅಧಿವೇಶನವು ದೂರದೃಷ್ಟಿ ಯೋಜನೆಯನ್ನು ಏಕೆ ಸಿದ್ಧಪಡಿಸಬೇಕೆಂಬ ವಿಷಯವನ್ನು ಮತ್ತೊಮ್ಮೆ ಪ್ರಶ್ನಿಸಿ ಬರುವ ಉತ್ತರಗಳನ್ನು ದಾಖಲಿಸುವುದು<br>• ತಜ್ಞ ಸಂಪನ್ಮೂಲ ವ್ಯಕ್ತಿಗಳು ಮಂಡಿಸಿದ ವಿಷಯದ ಕುರಿತು ಹಿಮ್ಮಾಹಿತಿ ಪಡೆದು, ನೆನಪಿನಲ್ಲಿಡಬೇಕಾದ ಅಂಶಗಳನ್ನು ಪಟ್ಟಿ ಮಾಡುವುದು ಮತ್ತು ಹಿಮ್ಮಾಹಿತಿ ಪಡೆದು ಅಧಿವೇಶನವನ್ನು ಮುಕ್ತಾಯಗೊಳಿಸುವುದು. (5 ನಿ) |

| | |
|---|---|
| **ನಿರೀಕ್ಷಿತ ಫಲಿತಾಂಶ** | • ಪ್ರಶಿಕ್ಷಣಾರ್ಥಿಗಳು ಅಧಿವೇಶನದಲ್ಲಿ ತಿಳಿಸಿದ ಹಂತಗಳ ಕುರಿತು ತಮ್ಮ ಸಹವರ್ತಿಗಳೊಂದಿಗೆ ಚರ್ಚಿಸಿ, ದೂರದೃಷ್ಟಿ ಯೋಜನೆ ಸಿದ್ಧತೆಯ ಕುರಿತು ಕಾರ್ಯಪ್ರವೃತ್ತರಾಗುವರು. |

| | |
|---|---|
| **ಅಧಿವೇಶನ– 3** | |
| **ವಿಷಯ** | **ಗ್ರಾಮೀಣ ಸಹಭಾಗಿ ಪರಾಮರ್ಶೆ– ಸಾಮಾಜಿಕ ನಕ್ಷೆ ಮತ್ತು ಸಂಪನ್ಮೂಲ ನಕ್ಷೆ** |
| **ಉಪವಿಷಯ** | • ಗ್ರಾಮೀಣ ಸಹಭಾಗಿ ಪರಾಮರ್ಶೆ– ಪರಿಚಯ<br>• ಗ್ರಾಮೀಣ ಸಹಭಾಗಿ ಪರಾಮರ್ಶೆ– ಮಹತ್ವ ಮತ್ತು ಅವಶ್ಯಕತೆ ವಿವರಣೆ<br>• ಕೇಂದ್ರೀಕೃತ ಗುಂಪು ಚರ್ಚೆ<br>• ಅಡ್ಡ ನಡಿಗೆ<br>• ಸಾಮಾಜಿಕ ನಕ್ಷೆ– ಪರಿಚಯ ವಿವರಣೆ<br>• ಸಂಪನ್ಮೂಲ ನಕ್ಷೆ – ಪರಿಚಯ ವಿವರಣೆ |
| **ಉದ್ದೇಶ** | ಗ್ರಾಮ ಪಂಚಾಯಿತಿಯ ದೂರದೃಷ್ಟಿ ಯೋಜನೆ ಸಿದ್ಧಪಡಿಸುವ ಸಂದರ್ಭದಲ್ಲಿ ನಾವು ವಾಸಿಸುವ ಗ್ರಾಮದ ವಾಸ್ತವ ಸ್ಥಿತಿಯನ್ನು ಅರ್ಥೈಸಿಕೊಂಡು ಮುಂದಿನ ಗುರಿಯನ್ನು ಸಿದ್ಧಪಡಿಸಲು ಸವಾಲುಗಳನ್ನು ಮತ್ತು ಸಲಹೆಗಳನ್ನು ಪಟ್ಟಿಮಾಡುವರು |
| **ಸಮಯ** | **135 ನಿಮಿಷಗಳು** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಹಿಂದಿನ ಅಧಿವೇಶನದಲ್ಲಿ ತಿಳಿಸಿರುವ 10 ಹಂತಗಳಲ್ಲಿ ಗ್ರಾಮೀಣ ಸಹಭಾಗಿ ಪರಾಮರ್ಶೆಯು ಯಾವ ಹಂತದಲ್ಲಿ ಬರುತ್ತದೆ ಎಂದು ಸಂವಾದವನ್ನು ಪ್ರಾರಂಭಿಸುವುದು |

- ಪ್ರಶಿಕ್ಷಣಾರ್ಥಿಗಳು ಉತ್ತರಿಸಿದ ನಂತರ, ಹೀಗೆ ಸಹಭಾಗಿ ಪರಾಮರ್ಶೆಯನ್ನು ಮಾಡುವುದರಿಂದಾಗುವ ಉಪಯೋಗಗಳೇನು ಎಂದು ಪ್ರಶ್ನಿಸುವುದು
- ಪ್ರಶಿಕ್ಷಣಾರ್ಥಿಗಳು ನೀಡುವ ಉತ್ತರವನ್ನು ಬೋರ್ಡಿನ ಮೇಲೆ ದಾಖಲಿಸುವುದು
- ಗ್ರಾಮೀಣ ಸಹಭಾಗಿ ಪರಾಮರ್ಶೆ ಎಂದರೇನು ಮತ್ತು ಹೇಗೆ ಆಯೋಜಿಸಬೇಕು ಎಂದು ತಿಳಿಸಿರುವ ವಿಡಿಯೋವನ್ನು ಪ್ರಸಾರ ಮಾಡುವುದು
- ತಜ್ಞ ಸಂಪನ್ಮೂಲ ವ್ಯಕ್ತಿಗಳ ವೀಡಿಯೋ ವೀಕ್ಷಣೆಯ ನಂತರ ತರಬೇತಿಯ ಪ್ರಶಿಕ್ಷಣಾರ್ಥಿಗಳನ್ನು ಗ್ರಾಮ ಪಂಚಾಯಿತಿವಾರು ಗುಂಪುಗಳನ್ನು ರಚಿಸುವುದು.
- ಕೇಂದ್ರೀಕೃತ ಚರ್ಚೆಗೆ ಸಂಬಂಧಿಸಿದಂತೆ, ವಿಷಯಗಳನ್ನು ಚರ್ಚಿಸುವುದು ಹೇಗೆ ಎಂದು ತಿಳಿಸುವುದು
- ಚುನಾಯಿತ ಪ್ರತಿನಿಧಿಗಳಾಗಿ ತಮಗೆ ತಮ್ಮ ಗ್ರಾಮದ ಪರಿಚಯ ಹೇಗಿದೆ ಎಂದು ಪ್ರಶ್ನಿಸುವುದು. ಮೂಲ ಸೌಕರ್ಯಗಳ ಜೊತೆಗೆ ಜನರ ಜೀವನವನ್ನು ಅರ್ಥೈಸಿಕೊಳ್ಳಲು ಜನರೊಂದಿಗೆ ಸಂವಾದ ನಡೆಸಿದ್ದೀರ ಎಂದು ಕೇಳಿ ಅವರಿಂದ ಬರುವ ಉತ್ತರಗಳನ್ನು ದಾಖಲಿಸುವುದು.
- ನಿಮ್ಮ ಊರಿನ ಸಂಪೂರ್ಣ ಮಾಹಿತಿ ಇದೆಯೇ ಎಂದು ಪ್ರಶ್ನಿಸುವುದು ಮತ್ತು ನಿಮ್ಮ ಊರಿನಲ್ಲಿ ಏನಿದೆ ಎಂದು ನೆನಪಿಸಿಕೊಳ್ಳಿ ಮತ್ತು ವಿವರಿಸಿ ಎನ್ನುವುದು.
- ಹಲವರು ತಮ್ಮ ಊರಿನ ಕುರಿತು ವಿವರಿಸುವರು ಮತ್ತೆ ಕೆಲವರು ಅವರು ಹೇಳುತ್ತಿರುವುದರಲ್ಲಿ ಕೆಲವು ತಪ್ಪುಗಳಿಗೆವ ಅಥವಾ ಬಿಟ್ಟು ಹೋಗಿದೆ ಎಂದು ಸೇರಿಸಬಹುದು.
- ಈ ಸಂದರ್ಭವನ್ನು ಬಳಸಿಕೊಂಡು ಸ್ಥಳೀಯ  ಸಂಪನ್ಮೂಲ ವ್ಯಕ್ತಿಗಳು ಗ್ರಾಮದ ಚಿತ್ರವನ್ನು ಬರೆಯುವ ಮುಂಚೆ ಗ್ರಾಮವನ್ನು ಒಂದು ಬಾರಿ ನೋಡಿ ಬರುವುದರಿಂದ ಹೆಚ್ಚು ಸ್ಪಷ್ಟತೆ ಸಿಗುತ್ತದೆ ಎಂದು ತಿಳಿಸುವುದು.
- ವಿಡಿಯೋದಲ್ಲಿ ತಿಳಿಸಿರುವಂತೆ ಸಾಮಾಜಿಕ ನಕ್ಷೆ ಮತ್ತು ಸಂಪನ್ಮೂಲ ನಕ್ಷೆಯನ್ನು ಬರೆಯಲು ಎರಡು ತಂಡಗಳನ್ನು ರಚಿಸುವುದು. ಗ್ರಾಮದ ಒಳಗಿನ

| | |
|---|---|
| | ಪರಿಚಯವಿರವವರು ಸಾಮಾಜಿಕ ನಕ್ಷೆಯನ್ನು ಮತ್ತು ಗ್ರಾಮದ ಹೊರಗಿನ ಪರಿಸರ ಮತ್ತ ಸಂಪನ್ಮೂಲಗಳ ಪರಿಚಯವಿರುವವರು ಸಂಪನ್ಮೂಲ ನಕ್ಷೆಯನ್ನು ಬರೆಯುವಂತೆ ತಿಳಿಸುವುದು.<br>• ದೊಡ್ಡ ಗ್ರಾಮ ಪಂಚಾಯಿತಿಯ ಎಲ್ಲರೂ ತರಬೇತಿಯಲ್ಲಿ ಭಾಗವಹಿಸಿದ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿಯ ಗ್ರಾಮಗಳವಾರು ನಕ್ಷೆಗಳನ್ನು ರಚಿಸಲು ತಿಳಿಸುವುದು<br>• ನಕ್ಷೆಗಳನ್ನು ಸಿದ್ಧಪಡಿಸಲು ಅಗತ್ಯವಿರುವ ಸಾಮಗ್ರಿಗಳನ್ನು ನೀಡಿ 30 ನಿಮಿಷಗಳ ಅವಧಿಯಲ್ಲಿ ನಕ್ಷೆಯನ್ನು ಪೂರ್ಣಗೊಳಿಸಲು ತಿಳಿಸುವುದು<br>• ನಕ್ಷೆಯು ಪೂರ್ಣಗೊಂಡ ನಂತರ, ನಕ್ಷೆಯನ್ನು ಎಲ್ಲರಿಗೂ ಅರ್ಥವಾಗುವಂತೆ ನಕ್ಷೆಯನ್ನು ಪರಿಚಯಿಸಿ ಎಂದು ತಿಳಿಸುವುದು<br>• ಸಾಮಾಜಿಕ ನಕ್ಷೆ ಮಂಡನೆಯಾದ ನಂತರ ನೀವು ವಿವರಿಸಿರುವ ನಕ್ಷೆಯಲ್ಲಿ ಪಂಚಾಯಿತಿಯು ಪರಿಹರಿಸಬೇಕಾದ ಸಮಸ್ಯೆಗಳಿವೆಯೇ ಎಂದು ಪ್ರಶ್ನಿಸುವುದು.<br>• ಚುನಾಯಿತ ಪ್ರತಿನಿಧಿಗಳು ತಾವು ಗುರುತಿಸಿರುವ ಮತ್ತು ಜನರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ವಿವರಿಸುವರು<br>• ನಂತರದಲ್ಲಿ ಸಂಪನ್ಮೂಲ ನಕ್ಷೆಯನ್ನು ವಿವರಿಸುವಂತೆ ತಿಳಿಸುವುದು<br>• ವಿವರಿಸಿದ ನಂತರ ಊರಿನ ಸುತ್ತಲಿನ ನಕ್ಷೆಯಲ್ಲಿ ಏನಾದರು ಸಮಸ್ಯೆಗಳಿವೆಯೇ ಮತ್ತು ಹೇಗೆ ಪರಿಹರಿಸಲು ಪ್ರಯತ್ನಿಸುತ್ತೀರಿ ಎಂದು ಕೇಳುವುದು.<br>• ಕೇಂದ್ರೀಕೃತ ಚರ್ಚೆಯಲ್ಲಿ ಗುರುತಿಸಿದ ಸಮಸ್ಯೆಗಳನ್ನು ನಕ್ಷೆಯಲ್ಲಿ ಅಳವಡಿಸಿ ಪರಿಹಾರ ಹುಡುಕುವುದು ಸುಲಭ ಮತ್ತು ವೈಜ್ಞಾನಿಕ ವಿಧಾನವೆಂದು ತಿಳಿಸುವುದು<br>• ಅಧಿವೇಶನದ ಅಂತಿಮದಲ್ಲಿ ಸಹಭಾಗಿ ಗ್ರಾಮೀಣ ಸಮೀಕ್ಷೆಯಿಂದ ಗ್ರಾಮ ಪಂಚಾಯಿತಿ ಯೋಜನೆ ಸಿದ್ಧಪಡಿಸಲು ಹೇಗೆ ಸಹಕಾರಿಯಾಗುತ್ತದೆ ಎಂಬ ಐದು ಅಂಶಗಳನ್ನು ತಿಳಿಸುವಂತೆ ಕೇಳುವುದು ಮತ್ತು ದಾಖಲಿಸುವುದು |

| | |
|---|---|
| | • ಸಾಧ್ಯವಾದಲ್ಲಿ, ನಿಮ್ಮ ಗ್ರಾಮದ ಸಾಮಾಜಿಕ ನಕ್ಷೆ ಮತ್ತು ಸಂಪನ್ಮೂಲ ನಕ್ಷೆಗಳನ್ನು ರಚಿಸಲು ಪ್ರಯತ್ನಿಸುವಂತೆ ತಿಳಿಸಿ ಅಧಿವೇಶನವನ್ನು ಮುಕ್ತಾಯಗೊಳಿಸುವುದು |
| **ನಿರೀಕ್ಷಿತ ಫಲಿತಾಂಶ** | ಗ್ರಾಮದ ವಾಸ್ತವ ಸ್ಥಿತಿಯನ್ನು ಅರ್ಥೈಸಿಕೊಳ್ಳಲು, ಸಮಸ್ಯೆ ಮತ್ತು ಸವಾಲುಗಳನ್ನು ಪರಿಹರಿಸಲು, ಸಹಭಾಗಿ ಗ್ರಾಮೀಣ ಸಮೀಕ್ಷೆಯ ಪ್ರಸ್ತುತತೆಯನ್ನು ಅರ್ಥೈಸಿಕೊಂಡು ಯೋಜನೆ ಸಿದ್ಧಪಡಿಸುವ ಹಂತದ ಕುರಿತು ವಿವರಿಸುವರು. |

| **ಅಧಿವೇಶನ–4** | |
|---|---|
| **ವಿಷಯ** | **ದೂರದೃಷ್ಟಿ ಯೋಜನೆ ನಮೂನೆಗಳ ಪರಿಚಯ** |
| **ಉಪವಿಷಯ** | • ದೂರದೃಷ್ಟಿ ಯೋಜನೆ ಸಿದ್ಧಪಡಿಸುವ ನಮೂನೆಗಳ ಪರಿಚಯ<br>• ನಮೂನೆ 1– ಸಮಸ್ಯೆಯನ್ನು ಅರ್ಥೈಸುವ ವಿವರಣೆ<br>• ನಮೂನೆ 2– ಸಮಸ್ಯೆಗಳನ್ನು ಪರಿಹರಿಸಲು ಕೈಗೊಳ್ಳಬೇಕಾದ ಚಟುವಟಿಕೆಗಳು ಮತ್ತು ಗುರಿಗಳ ನಿಗದಿ<br>• ನಮೂನೆ 3– ಯೋಜನೆ ಸಿದ್ಧಪಡಿಸಲು ದತ್ತಾಂಶ ಸಂಗ್ರಹಿಸುವ ನಮೂನೆ |
| **ಉದ್ದೇಶ** | ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ಏಕ ರೂಪದ ನಮೂನೆಗಳಲ್ಲಿ ತಮ್ಮ ಗ್ರಾಮ ಪಂಚಾಯಿತಿಯ ದೂರದೃಷ್ಟಿಯನ್ನು ಸಿದ್ಧಪಡಿಸಲು ಪೂರಕವಾದ ನಮೂನೆಗಳನ್ನು ವಿವರಿಸುವರು. |
| **ಸಮಯ** | **30 ನಿಮಿಷಗಳು** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ನಮೂನೆಗಳ ಪರಿಚಯ |
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಸಿದ್ಧಪಡಿಸಲು ಅಗತ್ಯವಿರುವ ಮಾಹಿತಿಯನ್ನು ಸಂಗ್ರಹಿಸಲು ರಾಜ್ಯ ಸರ್ಕಾರವು ನಮೂನೆಗಳನ್ನು ಸಿದ್ದಪಡಿಸಿರುವ ಹಿಂದಿನ ಉದ್ದೇಶದ ಬಗ್ಗೆ ವಿವರಿಸುವುದು |

| | |
|---|---|
| | • ಬಹುತೇಕ ಸಂದರ್ಭಗಳಲ್ಲಿ ಗ್ರಾಮ ಪಂಚಾಯಿತಿಗಳು ಮಾನವ ಅಭಿವೃದ್ಧಿ ಮತ್ತು ನೈಸರ್ಗಿಕ ಸಂಪನ್ಮೂಲಗಳ ವಿಷಯಗಳನ್ನು ಕೈ ಬಿಡುವ ಸಂದರ್ಭಗಳು ಹೆಚ್ಚಿರುವ ಕಾರಣ ನಮೂನೆಗಳಲ್ಲಿ ಸಮಸ್ಯೆಗಳನ್ನು ಪರಿಚಯಿಸುವುದು.<br>• ಈ ನಮೂನೆಗಳನ್ನು ಬಳಸಿಕೊಂಡು ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸುವುದು ಸುಲಭವಾಗುತ್ತದೆ ಎಂದು ತಿಳಿಸುವುದು.<br>• ನಮೂನೆಗಳ ಕುರಿತಾಗಿ ತಜ್ಞ ಸಂಪನ್ಮೂಲ ವ್ಯಕ್ತಿಗಳು ನೀಡುವ ವಿವರಣೆಯ ವಿಡಿಯೋವನ್ನು ಪ್ರಸಾರಮಾಡುವುದು.<br>• ವಿಡಿಯೋ ಪ್ರಸಾರವಾದ ನಂತರ ನಮೂನೆಗಳನ್ನು ಸ್ಥಳೀಯವಾಗಿ ನೀಡಿರುವ ಪಿಪಿಟಿ ಮೂಲಕ ಮತ್ತೊಮ್ಮೆ ವೀಕ್ಷಿಸಲು ಅವಕಾಶ ನೀಡುವುದು.<br>• ಪ್ರಶಿಕ್ಷಣಾರ್ಥಿಗಳು ಕೇಳುವ ಪ್ರಶ್ನೆಗೆ ಉತ್ತರಗಳನ್ನು ನೀಡುವುದು. ಕೆಲವೊಂದು ಪ್ರಶ್ನೆಗಳಿಗೆ ಉತ್ತರಿಸಲಾಗದಿದ್ದಲ್ಲಿ, ಸಂಜೆಯ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರಿಸಲಾಗುವುದು ಎಂದು ತಿಳಿಸುವುದು. |
| **ನಿರೀಕ್ಷಿತ ಫಲಿತಾಂಶ** | ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆಯನ್ನು ಪರಿಣಾಮಕಾರಿಯಾಗಿ ಯೋಜಿಸಲು ನಮೂನೆಗಳನ್ನು ಬಳಸಿ ಅಗತ್ಯ ಮಾಹಿತಿಯನ್ನು ಸಂಗ್ರಹಿಸುವರು ಮತ್ತು ಸಮಸ್ಯೆಗಳನ್ನು ಪರಿಹರಿಸಲು ನಿಗದಿತ ಅವಧಿಯ ಗುರಿಗಳನ್ನು ನಿಗದಿಮಾಡುವರು. |

| **ಅಧಿವೇಶನ–5** | |
|---|---|
| **ವಿಷಯ** | **ಗ್ರಾಮ ಪಂಚಾಯಿತಿವಾರು ಗುಂಪುಗಳ ರಚನೆ** |
| **ಉಪವಿಷಯ** | • ಗ್ರಾಮವಾರು/ಗ್ರಾಮ ಪಂಚಾಯಿತಿವಾರು ತಂಡಗಳ ರಚನೆ<br>• ಕೇಂದ್ರೀಕೃತ ತಂಡಗಳಲ್ಲಿ ವಿಷಯಗಳನ್ನು ಚರ್ಚಿಸಲು ಅವಕಾಶ |

| | |
|---|---|
| **ಉದ್ದೇಶ** | ಗ್ರಾಮವಾರು/ ಗ್ರಾಮ ಪಂಚಾಯಿತಿವಾರು ತಂಡಗಳಲ್ಲಿ ವಲಯವಾರು ವಿಷಯಗಳನ್ನು ಅರ್ಥೈಸಿಕೊಂಡು ಪರಿಹಾರವನ್ನು ಗುಂಪಿನಲ್ಲಿ ಮಂಡಿಸುವರು |
| **ಸಮಯ** | **15 ನಿಮಿಷ** |
| **ವಿಧಾನ** | ಸ್ಥಳೀಯವಾಗಿ ಗುಂಪುಗಳ ರಚನೆ |
| **ಪೂರಕ ಸಾಮಗ್ರಿಗಳು** | ಓದುವ ಸಾಮಗ್ರಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಗುಂಪುಗಳನ್ನು ಗ್ರಾಮವಾರು/ಗ್ರಾಮ ಪಂಚಾಯಿತಿವಾರು ರಚಿಸುವುದು<br>• ಗುಂಪುಗಳ ರಚನೆಯ ಸಂದರ್ಭದಲ್ಲಿ ಎಲ್ಲಾ ತಂಡಗಳಲ್ಲಿ ಮಹಿಳೆಯರು ಇರುವಂತೆ ಗಮನ ಹರಿಸುವುದು.<br>• ಗುಂಪಿನಲ್ಲಿ ಎಲ್ಲಾ ಸದಸ್ಯರು ಸಕ್ರಿಯವಾಗಿ ಭಾಗವಹಿಸಿ ತಮ್ಮ ಅನುಭವವನ್ನು ಹಂಚಿಕೊಳ್ಳುವಂತೆ ತಿಳಿಸುವುದು.<br>• ಗುಂಪುಗಳಲ್ಲಿ ಎಲ್ಲರಿಗೂ ಸಮಾನ ಅವಕಾಶಗಳು ದೊರೆಯುವಂತೆ ಗಮನ ಹರಿಸುವುದು. |
| **ನಿರೀಕ್ಷಿತ ಫಲಿತಾಂಶ** | ಪ್ರಶಿಕ್ಷಣಾರ್ಥಿಗಳು ಗುಂಪುಗಳಲ್ಲಿ ದೂರದೃಷ್ಟಿ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರೀಕೃತ ಚರ್ಚೆ ನಡೆಸುವ ಸಂದರ್ಭದಲ್ಲಿ ಎಲ್ಲರ ಪಾಲ್ಗೊಳ್ಳುವಿಕೆಯನ್ನು ಖಾತರಿಪಡಿಸುವರು ಮತ್ತು ನಮೂದಿಸಿದ ವಿಷಯಗಳನ್ನು ಯೋಜನೆಯ ಭಾಗವನ್ನಾಗಿಸುವರು. |

| **ಅಧಿವೇಶನ-6** | |
|---|---|
| **ವಿಷಯ** | **ಶಿಕ್ಷಣ ವಲಯ** |
| **ಉಪವಿಷಯ** | • ಶಿಕ್ಷಣದ ಮಹತ್ವ ಮತ್ತು ಅವಶ್ಯಕತೆ- ಪರಿಚಯ<br>• ದೇಶದ ಮತ್ತು ರಾಜ್ಯದ ಅಂಕಿ ಅಂಶಗಳು |

| | |
|---|---|
| | • ಶಿಕ್ಷಣ ಕ್ಷೇತ್ರದಲ್ಲಿರುವ ಪ್ರಮುಖ ಸಮಸ್ಯೆಗಳು<br>• ನಮೂನೆಗಳನ್ನು ಬಳಸಿ ಯೋಜನೆ ಸಿದ್ಧಪಡಿಸುವುದು |
| **ಉದ್ದೇಶ** | ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಸಮಸ್ಯೆಗಳು ಮತ್ತು ಸವಾಲುಗಳನ್ನು ಪಟ್ಟಿ ಮಾಡುವರು |
| **ಸಮಯ** | **45 ನಿಮಿಷ** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ, ಸ್ಥಳೀಯ ಚಟುವಟಿಕೆ |
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಪ್ರಾರಂಭದಲ್ಲಿ ಶಿಕ್ಷಣ ವಲಯಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಪ್ರದೇಶಗಳು ಎದುರಿಸುತ್ತಿರುವ ಸಮಸ್ಯೆಗಳ ಕುರಿತ ಅನಿಮೇಟೆಡ್ ವಿಡಿಯೋ ವೀಕ್ಷಣೆ (5 ನಿಮಿಷ)<br>• ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಕೈಗೊಳ್ಳಬಹುದಾದ ಕ್ರಮಗಳ ಕುರಿತ ವಿಷಯ ಮಂಡನೆಯ ವಿಡಿಯೋ ಪ್ರಸರಣ (10 ನಿಮಿಷ)<br>• ಈ ಹಿಂದೆ ರಚಿಸಲಾಗಿರುವ ಗುಂಪುಗಳಲ್ಲಿ ಶಿಕ್ಷಣ ವಲಯಕ್ಕೆ ಸಂಬಂಧಿದಂತೆ ಪ್ರಶಿಕ್ಷಣಾರ್ಥಿಗಳ ಗ್ರಾಮ ಪಂಚಾಯಿತಿ ಮಟ್ಟದ ಸಮಸ್ಯೆಗಳು ಮತ್ತು ಪರಿಹಾರಗಳನ್ನು ಚರ್ಚಿಸುವುದು 10 ನಿಮಿಷಗಳು<br>• ಶಿಕ್ಷಣ ವಲಯದ ನಮೂನೆಗಳನ್ನು ಅರ್ಥೈಸಿಕೊಂಡು ಯೋಜನೆಯನ್ನು ಸಿದ್ಧಪಡಿಸುವರು 10 ನಿಮಿಷಗಳು<br>• ಗ್ರಾಮ ಪಂಚಾಯಿತಿವಾರು ಸಿದ್ಧಪಡಿಸಿದ ನಮೂನೆಗಳನ್ನು ಮಂಡಿಸುವರು – 10 ನಿಮಿಷಗಳು |
| **ನಿರೀಕ್ಷಿತ ಫಲಿತಾಂಶ** | ಶಿಕ್ಷಣ ವಲಯಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿವಾರು ಕರಡು ಯೋಜನೆಯನ್ನು ಸಿದ್ಧಪಡಿಸುವರು |

| ಅಧಿವೇಶನ–7 | |
|---|---|
| ವಿಷಯ | **ಆರೋಗ್ಯ ವಲಯ** |
| ಉಪವಿಷಯ | • ಆರೋಗ್ಯದ ವಾಖ್ಯಾನ, ಮಹತ್ವದ ಪರಿಚಯ<br>• ಆರೋಗ್ಯ ವಲಯದ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಅಂಕಿ ಅಂಶಗಳು<br>• ಆರೋಗ್ಯ ವಲಯದ ಪ್ರಮುಖ ಸಮಸ್ಯೆಗಳ ಪರಿಚಯ<br>• ಗ್ರಾಮೀಣ ಪ್ರದೇಶದಲ್ಲಿ ಕಂಡು ಬರುವ ಸಾಮಾನ್ಯ ಆರೋಗ್ಯ ಸಮಸ್ಯೆಗಳು, ಸವಾಲುಗಳ ಪರಿಚಯ<br>• ನಮೂನೆಗಳನ್ನು ಬಳಸಿ ಯೋಜನೆ ಸಿದ್ಧಪಡಿಸುವುದು |
| ಉದ್ದೇಶ | ಗ್ರಾಮೀಣ ಪ್ರದೇಶದ ಸ್ಥಳೀಯ ಆರೋಗ್ಯ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಪರಿಹಾರೋಪಾಯಗಳನ್ನು ಪಟ್ಟಿ ಮಾಡುವುದು |
| ಸಮಯ | **60 ನಿಮಿಷ** |
| ವಿಧಾನ | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |
| ಪೂರಕ ಸಾಮಗ್ರಿಗಳು | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ | • ಗ್ರಾಮೀಣ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ಆರೋಗ್ಯ ಸಮಸ್ಯೆಗಳನ್ನು ಗುರುತಿಸುವಂತೆ ತಿಳಿಸುವುದು<br>• ನಂತರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದಂತೆ ಗಮನಿಸಿರುವ ಸಮಸ್ಯೆಗಳ ಕುರಿತ ಅನಿಮೇಟೆಡ್ ವಿಡಿಯೋ ವೀಕ್ಷಣೆ (5 ನಿಮಿಷ)<br>• ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಆರೋಗ್ಯದ ಕುರಿತಾದ 10 ನಿಮಿಷದ ವಿಡಿಯೋ ಪ್ರಸರಣ<br>• ಆರೋಗ್ಯಕ್ಕೆ ಸಂಬಂಧಿಸದಂತೆ ಗುಂಪಿನಲ್ಲಿ ಗ್ರಾಮ ಪಂಚಾಯಿತಿವಾರು ಚರ್ಚೆ 15 ನಿಮಿಷಗಳು |

| | |
|---|---|
| | • ಆರೋಗ್ಯಕ್ಕೆ ಸಂಬಂಧಿಸಿದಂತೆ ನಮೂನೆಗಳನ್ನು ಭರ್ತಿ ಮಾಡುವುದು 15 ನಿಮಿಷ<br>• ಆರೋಗ್ಯ ವಲಯಕ್ಕೆ ಸಂಬಂಧಿಸಿದ ನಮೂನೆಗಳ ವಿಷಯ ಮಂಡನೆ 10 ನಿಮಿಷ |
| **ನಿರೀಕ್ಷಿತ ಫಲಿತಾಂಶ** | ಗ್ರಾಮ ಪಂಚಾಯಿತಿ ಹಂತದ ಆರೋಗ್ಯ ವಲಯದ ಸಮಸ್ಯೆಗಳು ಮತ್ತು ಸವಾಲುಗಳನ್ನು ಪಟ್ಟಿ ಮಾಡುವರು ಮತ್ತು ಪರಿಹಾರ ಮಾರ್ಗಗಳನ್ನು ಗುರುತಿಸುವರು |

| **ಅಧಿವೇಶನ– 8** | |
|---|---|
| **ವಿಷಯ** | **ಮಹಿಳೆಯರ ಅಭಿವೃದ್ಧಿ ಯೋಜನೆ** |
| **ಉಪವಿಷಯ** | • ಮಹಿಳೆಯರು ಮತ್ತು ಅಭಿವೃದ್ಧಿ ಪರಿಚಯ<br>• ಭಾರತದಲ್ಲಿ ಮತ್ತು ಕರ್ನಾಟಕದಲ್ಲಿ ಮಹಿಳೆಯರ ಸ್ಥಾನಮಾನ<br>• ಮಹಿಳೆಯರಿಗೆ ಸಂಬಂಧಿಸಿದ ನಮೂನೆಗಳನ್ನು ಬಳಸಿ ಯೋಜನೆ ತಯಾರಿ ಚಟುವಟಿಕೆ |
| **ಉದ್ದೇಶ** | ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು, ಸವಾಲುಗಳನ್ನು ಪಟ್ಟಿ ಮಾಡುವರು |
| **ಸಮಯ** | **60 ನಿಮಿಷಗಳು** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಸಾಮಾನ್ಯವಾಗಿ ಎದುರಿಸುವ ಸಮಸ್ಯೆಗಳನ್ನು ಗುರುತಿಸುವಂತೆ ತಿಳಿಸುವುದು<br>• ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಎದುರಿಸುತ್ತಿರುವ ಸವಾಲುಗಳಿಗೆ ಸಂಬಂಧಿಸಿದಂತೆ ಇರುವ ಅನಿಮೇಟೆಡ್ ವಿಡಿಯೋ ವೀಕ್ಷಣೆ (5 ನಿಮಿಷ) |

| | |
|---|---|
| | • ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಮಹಿಳೆಯರು ಎದುರಿಸುತ್ತಿರುವ ಸವಾಲುಗಳು ಮತ್ತು ಪರಿಹಾರದ ಕುರಿತಾದ 10 ನಿಮಿಷದ ವಿಡಿಯೋ ಪ್ರಸರಣ<br>• ಮಹಿಳೆಯರ ಸವಾಲುಗಳು/ ಸಮಸ್ಯೆಗಳ ಕುರಿತು ಗುಂಪಿನಲ್ಲಿ ಗ್ರಾಮ ಪಂಚಾಯಿತಿವಾರು ಚರ್ಚೆ 15 ನಿಮಿಷಗಳು<br>• ಮಹಿಳೆಯರ ಅಭಿವೃದ್ಧಿಗೆ ಸಂಬಂಧಿಸಿದಂತೆ ನಮೂನೆಗಳನ್ನು ಭರ್ತಿ ಮಾಡುವುದು 15 ನಿಮಿಷ<br>• ಮಹಿಳೆಯರ ಅಭಿವೃದ್ಧಿ ವಿಷಯದ ನಮೂನೆಗಳ ವಿಷಯ ಮಂಡನೆ –10 ನಿಮಿಷಗಳು |
| **ನಿರೀಕ್ಷಿತ ಫಲಿತಾಂಶ** | ಗ್ರಾಮ ಪಂಚಾಯಿತಿ ಹಂತದ ಮಹಿಳೆಯರ ಅಭಿವೃದ್ಧಿ ವಿಷಯದಲ್ಲಿ ಎದುರಾಗುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಪಟ್ಟಿ ಮಾಡುವರು ಮತ್ತು ಪರಿಹಾರಾತ್ಮಕ ಸಲಹೆಗಳನ್ನು ನೀಡುವರು. |

| **ಅಧಿವೇಶನ–9** | |
|---|---|
| **ವಿಷಯ** | **ಮಕ್ಕಳ ಅಭಿವೃದ್ಧಿ ಯೋಜನೆ** |
| **ಉಪವಿಷಯ** | • ಮಕ್ಕಳ ವ್ಯಾಖ್ಯಾನ ಪರಿಚಯ<br>• ದೇಶದಲ್ಲಿ ಮತ್ತು ರಾಜ್ಯದಲ್ಲಿ ಮಕ್ಕಳ ಸ್ಥಿತಿಗತಿಗಳು<br>• ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ಸಮಸ್ಯೆಗಳು<br>• ಮಕ್ಕಳ ಅಭಿವೃದ್ಧಿಗಾಗಿನ ನಮೂನೆಗಳ ಪರಿಚಯ |
| **ಉದ್ದೇಶ** | ಗ್ರಾಮೀಣ ಪ್ರದೇಶದಲ್ಲಿ ಇರುವ ಎಲ್ಲಾ ವಯ್ಯೋಮಾನದ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಪಟ್ಟಿಮಾಡುವರು |
| **ಸಮಯ** | **45 ನಿಮಿಷಗಳು** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |

| | |
|---|---|
| ಪೂರಕ ಸಾಮಗ್ರಿಗಳು | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ | • ಗ್ರಾಮೀಣ ಪ್ರದೇಶದಲ್ಲಿ ಮಕ್ಕಳು ಸಾಮಾನ್ಯವಾಗಿ ಎದುರಿಸುವ ಸಮಸ್ಯೆಗಳನ್ನು ಪಟ್ಟಿ ಮಾಡುವಂತೆ ತಿಳಿಸುವುದು<br>• ನಂತರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಮಕ್ಕಳಿಗೆ ಸಂಬಂಧಿಸಿದಂತೆ ಗಮನಿಸಿರುವ ಸಮಸ್ಯೆಗಳ ಕುರಿತ ಅನಿಮೇಟೆಡ್ ವಿಡಿಯೋ ವೀಕ್ಷಣೆ ( 5 ನಿಮಿಷ)<br>• ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಮಕ್ಕಳ ಸ್ಥಿತಿಗತಿಗಳ ಕುರಿತಾದ 10 ನಿಮಿಷದ ವಿಡಿಯೋ ಪ್ರಸರಣ<br>• ಮಕ್ಕಳಿಗೆ ಸಂಬಂಧಿಸದಂತೆ ಗುಂಪಿನಲ್ಲಿ ಗ್ರಾಮ ಪಂಚಾಯಿತಿವಾರು ಗುಂಪು ಚರ್ಚೆ 10 ನಿಮಿಷಗಳು<br>• ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ನಮೂನೆಗಳನ್ನು ಭರ್ತಿ ಮಾಡುವುದು 10 ನಿಮಿಷ<br>• ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ನಮೂನೆಗಳಲ್ಲಿ ವಿಷಯ ಮಂಡನೆ |
| ನಿರೀಕ್ಷಿತ ಫಲಿತಾಂಶ | ಗ್ರಾಮ ಪಂಚಾಯಿತಿ ಮಿತಿಯಲ್ಲಿರುವ ಮಕ್ಕಳ ಅಭಿವೃದ್ದಿಗಾಗಿ ಕೈಗೊಳ್ಳಬಹುದಾದ ಕ್ರಮಗಳು ಮತ್ತು ಚಟುವಟಿಕೆಗಳನ್ನು ಪಟ್ಟಿ ಮಾಡುವರು |

**ಪ್ರಶ್ನೋತ್ತರ ಅವಧಿ**

ತರಬೇತಿಯ ಎರಡನೇ ದಿನ ಮೊದಲ ಮತ್ತು ಎರಡನೇ ದಿನಕ್ಕೆ ಸಂಬಂಧಿಸಿದಂತೆ ಮಂಡಿಸಲಾದ ವಿಷಯಗಳ ಕುರಿತು ಮತ್ತು ಚುನಾಯಿತ ಪ್ರತಿನಿಧಿಗಳು ಕೇಳುವ ಪ್ರಶ್ನೆಗಳಿಗೆ ಸಮಯ **04.15 ರಿಂದ 05.00 ಗಂಟೆಯ** ವರೆಗೆ ಉತ್ತರಿಸುವ ಸಲುವಾಗಿ ರಾಜ್ಯ ಮಟ್ಟದ ಸಂಪನ್ಮೂಲ ವ್ಯಕ್ತಿಗಳು ಬೆಂಗಳೂರು ಸ್ಯಾಟ್ ಕಾಂ ಸ್ಟುಡಿಯೋನಿಂದ ಉತ್ತರಿಸುವರು.

| **ಅಧಿವೇಶನ-10** | |
|---|---|
| ವಿಷಯ | **ಜಲ ಸಮೃದ್ಧಿ ಗ್ರಾಮ ಪಂಚಾಯಿತಿ ಯೋಜನೆ** |

| | |
|---|---|
| **ಉಪವಿಷಯ** | • ನೀರಿನ ಮೂಲಗಳು, ಸಂರಕ್ಷಣೆ– ಪರಿಚಯ<br>• ನೀರಿನ ಅಸಮರ್ಪಕ ಮತ್ತು ಅವೈಜ್ಞಾನಿಕ ಬಳಕೆಯಿಂದಾಗುವ ದುಷ್ಪರಿಣಾಮಗಳ ಪರಿಚಯ<br>• ನೀರಿನ ನಿರ್ವಹಣೆ ಕುರಿತು ನಮೂನೆಗಳನ್ನು ಬಳಸಿ ಯೋಜನೆ ತಯಾರಿ |
| **ಉದ್ದೇಶ** | ನೀರಿನ ಗುಣಮಟ್ಟ, ನೀರಿನ ನಿರ್ವಹಣೆ ಮತ್ತು ಸಂರಕ್ಷಣೆಯ ಮಹತ್ವದ ಕುರಿತು ವಿಷಯ ಮಂಡಿಸುವರು |
| **ಸಮಯ** | **45 ನಿಮಿಷ** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ನೀರಿನ ಸ್ವಾವಲಂಭನೆ ಮತ್ತು ನಿರ್ವಹಣೆಯಲ್ಲಿ ಗ್ರಾಮವು ಎದುರಿಸುತ್ತಿರುವ ಸಮಸ್ಯೆಗಳ ಕುರಿತು 5 ನಿಮಿಷದ ಸಂವಾದ<br>• ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಗಮನಿಸಿರುವ ಸಮಸ್ಯೆಗಳ ಕುರಿತ ಅನಿಮೇಟೆಡ್ ವಿಡಿಯೋ ವೀಕ್ಷಣೆ<br>• ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ನೀರಿನ ನಿರ್ವಹಣೆ, ಸಂರಕ್ಷಣೆ ಕುರಿತಾದ 10 ನಿಮಿಷದ ವಿಡಿಯೋ ಪ್ರಸರಣ<br>• ಕುಡಿಯುವ ನೀರಿಗೆ ಸಂಬಂಧಿಸದಂತೆ ಗ್ರಾಮ ಪಂಚಾಯಿತಿವಾರು ಗುಂಪು ಚರ್ಚೆ 10 ನಿಮಿಷಗಳು<br>• ಕುಡಿಯುವ ನೀರಿಗೆ ಸಂಬಂಧಿಸಿದಂತೆ ನಮೂನೆಗಳನ್ನು ಭರ್ತಿ ಮಾಡುವುದು 10 ನಿಮಿಷ<br>• ಕುಡಿಯುವ ನೀರಿಗೆ ಸಂಬಂಧಿಸಿದಂತೆ ನಮೂನೆಗಳಲ್ಲಿ ವಿಷಯ ಮಂಡನೆ |
| **ನಿರೀಕ್ಷಿತ ಫಲಿತಾಂಶ** | ಗ್ರಾಮ ಪಂಚಾಯಿತಿ ಹಂತದ ಆರೋಗ್ಯ ವಲಯದ ಸಮಸ್ಯೆಗಳು ಮತ್ತು ಸವಾಲುಗಳನ್ನು ಪಟ್ಟಿ ಮಾಡುವರು |

| **ಅಧಿವೇಶನ–11** | |
|---|---|
| **ವಿಷಯ** | **ಸ್ವಚ್ಛ ಮತ್ತು ಹಸಿರು ಗ್ರಾಮ ಪಂಚಾಯಿತಿ** |
| **ಉಪವಿಷಯ** | • ಸ್ವಚ್ಛ ಮತ್ತು ಹಸಿರು ಗ್ರಾಮ ಪಂಚಾಯಿತಿ ಪರಿಕಲ್ಪನೆಯ ಪರಿಚಯ<br>• ಸ್ವಚ್ಛ ಮತ್ತು ಹಸಿರು ಗ್ರಾಮವಾಗಿಸಲು ಪಂಚಾಯಿತಿಯು ಕೈಗೊಳ್ಳಬೇಕಾದ ಕ್ರಮಗಳು<br>• ನಮೂನೆಗಳಲ್ಲಿ ವಿಷಯವಾರು ಯೋಜನೆ ತಯಾರಿಕೆ |
| **ಉದ್ದೇಶ** | ಗ್ರಾಮಗಳನ್ನು ಸ್ವಚ್ಛ ಮತ್ತು ಹಸಿರನ್ನಾಗಿಸಲು ಗ್ರಾಮ ಪಂಚಾಯಿತಿಯು ಕೈಗೊಳ್ಳಬಹುದಾದ ಚಟುವಟಿಕೆಗಳನ್ನು ಪಟ್ಟಿಮಾಡುವರು |
| **ಸಮಯ** | **60 ನಿಮಿಷಗಳು** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಸ್ವಚ್ಛ ಮತ್ತು ಹಸಿರು ಗ್ರಾಮದ ಕುರಿತು ಪ್ರಶಿಕ್ಷಣಾರ್ಥಿಗಳ ಅಭಿಪ್ರಾಯ ಸಂಗ್ರಹಿಸುವುದು<br>• ಸ್ವಚ್ಛ ಮತ್ತು ಹಸಿರು ಗ್ರಾಮದ ಪರಿಕಲ್ಪನೆ ನೀಡುವ ಅನಿಮೇಟೆಡ್ ವಿಡಿಯೋ ವೀಕ್ಷಣೆ<br>• ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಸ್ವಚ್ಛ ಮತ್ತು ಹಸಿರು ಗ್ರಾಮ ಕುರಿತಾದ 10 ನಿಮಿಷದ ವಿಡಿಯೋ ಪ್ರಸರಣ<br>• ಸ್ವಚ್ಛ ಮತ್ತು ಹಸಿರು ಗ್ರಾಮಕ್ಕೆ ಸಂಬಂಧಿಸದಂತೆ ಗುಂಪಿನಲ್ಲಿ ಗ್ರಾಮ ಪಂಚಾಯಿತಿವಾರು ಗುಂಪುಚರ್ಚೆ 10 ನಿಮಿಷಗಳು<br>• ಸ್ವಚ್ಛ ಮತ್ತು ಹಸಿರು ಗ್ರಾಮಕ್ಕೆ ಸಂಬಂಧಿಸಿದಂತೆ ನಮೂನೆಗಳನ್ನು ಭರ್ತಿ ಮಾಡುವುದು 20 ನಿಮಿಷ |

| | |
|---|---|
| | • ಸ್ವಚ್ಛ ಮತ್ತು ಹಸಿರು ಗ್ರಾಮಕ್ಕೆ ಸಂಬಂಧಿಸಿದ ನಮೂನೆಗಳ ವಿಷಯ ಮಂಡನೆ |
| **ನಿರೀಕ್ಷಿತ ಫಲಿತಾಂಶ** | ಗ್ರಾಮವು ಸ್ವಚ್ಛ ಮತ್ತು ಹಸಿರು ಗ್ರಾಮವಾಗಲು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸುವುದು ಮತ್ತು ಪರಿಹಾರೋಪಾಯಗಳನ್ನು ಪಟ್ಟಿಮಾಡುವುದು. |

| **ಅಧಿವೇಶನ–12** | |
|---|---|
| **ವಿಷಯ** | **ಸಾಮಾಜಿಕ ಸುರಕ್ಷಿತ ಗ್ರಾಮ ಪಂಚಾಯಿತಿ** |
| **ಉಪವಿಷಯ** | • ಸಾಮಾಜಿಕ ಸುರಕ್ಷಿತ ಗ್ರಾಮ ಪಂಚಾಯಿತಿ ಪರಿಕಲ್ಪನೆ ಪರಿಚಯ<br>• ಸಾಮಾಜಿಕ ಸುರಕ್ಷಿತ ಗ್ರಾಮದ ವಿವಿಧ ಯೋಜನೆಗಳ ಪರಿಚಯ<br>• ಸಾಮಾಜಿಕ ಸುರಕ್ಷಿತ ಗ್ರಾಮದ ನಮೂನೆಗಳನ್ನು ಬಳಸಿ ಯೋಜನೆ ತಯಾರಿ |
| **ಉದ್ದೇಶ** | ಗ್ರಾಮಗಳನ್ನು ಸಾಮಾಜಿಕ ಸುರಕ್ಷಿತ ಗ್ರಾಮಗಳನ್ನಾಗಿಸಲು ಗ್ರಾಮಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸುವರು ಮತ್ತು ಪಟ್ಟಿ ಮಾಡುವರು |
| **ಸಮಯ** | **60 ನಿಮಿಷಗಳು** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಗ್ರಾಮೀಣ ಸಮಾಜದಲ್ಲಿರುವ ದುರ್ಬಲ ಮತ್ತು ತುಳಿತಕ್ಕೊಳಗಾದ ಜನರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳನ್ನು ಪಟ್ಟಿ ಮಾಡುವರು<br>• ಗ್ರಾಮೀಣ ಪ್ರದೇಶದಲ್ಲಿರುವ ಸಾಮಾಜಿಕ ಸಮಸ್ಯೆಗಳ ಕುರಿತ ಅನಿಮೇಟೆಡ್ ವಿಡಿಯೋ ವೀಕ್ಷಣೆ<br>• ಗ್ರಾಮೀಣ ಪ್ರದೇಶದ ಸಾಮಾಜಿಕ ಸುರಕ್ಷತೆ ಕುರಿತು ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ವಿಷಯ ಮಂಡನೆ 10 ನಿಮಿಷ<br>• ಗ್ರಾಮೀಣ ಪ್ರದೇಶದ ಸಾಮಾಜಿಕ ಸಮಸ್ಯೆಗಳು ಮತ್ತು ಸವಾಲುಗಳ ಕುರಿತು ಗುಂಪು ಚರ್ಚೆ 15 ನಿಮಿಷ |

| | |
|---|---|
| | • ಒದಗಿಸಿರುವ ನಮೂನೆಗಳಲ್ಲಿ ಗ್ರಾಮ ಪಂಚಾಯಿತಿ ಹಂತದ ಸಾಮಾಜಿಕ ಸುರಕ್ಷತಾ ಯೋಜನೆ ತಯಾರಿ 15 ನಿಮಿಷಗಳು<br>• ಸಾಮಾಜಿಕ ಸುರಕ್ಷತಾ ಯೋಜನೆ –ವಿಷಯ ಮಂಡನೆ 10 ನಿಮಿಷಗಳು |
| **ನಿರೀಕ್ಷಿತ ಫಲಿತಾಂಶ** | ಗ್ರಾಮಗಳ ಸಾಮಾಜಿಕ ಸುರಕ್ಷತಾ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ಗುರಿಯನ್ನು ಸಾಧಿಸಲು ಕಾಲಾವಕಾಶವನ್ನು ನಿಗಧಿಪಡಿಸುವರು |

| **ಅಧಿವೇಶನ–13** | |
|---|---|
| **ವಿಷಯ** | **ಗ್ರಾಮ ಪಂಚಾಯಿತಿ ಹಂತದಲ್ಲಿ ಸೇವೆ ಒದಗಿಸುವ ಘಟಕಗಳು** |
| **ಉಪವಿಷಯ** | • ಗ್ರಾಮ ಪಂಚಾಯಿತಿ ಹಂತದಲ್ಲಿ ಸೇವೆಗಳನ್ನು ಒದಗಿಸುವ ವಿವಿಧ ಇಲಾಖೆಗಳು ಮತ್ತು ಕಾರ್ಯಕ್ರಮಗಳ ಪರಿಚಯ<br>• ಗ್ರಾಮ ಪಂಚಾಯಿತಿ ಮಟ್ಟದಲ್ಲಿ ದೊರೆಯುವ ವಿವಿಧ ಸೇವೆಗಳ ಪರಿಚಯ<br>• ನಮೂನೆಗಳಲ್ಲಿ ಸೇವೆಗಳ ಲಭ್ಯತೆ– ಗುಂಪು ಚಟುವಟಿಕೆ |
| **ಉದ್ದೇಶ** | ಗ್ರಾಮಗಳಲ್ಲಿ ಜನರಿಗೆ, ಜಾನುವಾರುಳಿಗೆ ದೊರೆಯುತ್ತಿರುವ ಸೇವೆಗಳು ಮತ್ತು ಸವಲತ್ತುಗಳನ್ನು ಪಟ್ಟಿಮಾಡುವುದು/ ವಿವರಿಸುವುದು |
| **ಸಮಯ** | **45 ನಿಮಿಷಗಳು** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಗ್ರಾಮ ಪಂಚಾಯಿತಿ ಹಂತದಲ್ಲಿ ಗ್ರಾಮಸ್ತರು ಪಡೆಯಲು ಇಚ್ಛಿಸುವ ಸೇವೆಗಳ ಕುರಿತು ಸಂವಾದ<br>• ಗ್ರಾಮದಲ್ಲಿ ದೊರೆಯುತ್ತಿರುವ ಸೇವೆಗಳ ಕುರಿತ ಅನಿಮೇಟೆಡ್ ವಿಡಿಯೋ<br>• ಗ್ರಾಮದಲ್ಲಿ ದೊರೆಯುತ್ತಿರುವ ಸೇವೆಗಳ ಕುರಿತು ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ವಿಷಯ ಮಂಡನೆ– ವಿಡಿಯೋ 10 ನಿಮಿಷಗಳು |

| | |
|---|---|
| | • ಗ್ರಾಮ ಪಂಚಾಯಿತಿ ಮಟ್ಟದಲ್ಲಿ ದೊರೆಯುತ್ತಿರುವ ಸೇವೆಗಳ ಕುರಿತು ಗುಂಪು ಚರ್ಚೆ 10 ನಿಮಿಷ<br>• ಗ್ರಾಮ ಪಂಚಾಯಿತಿವಾರು ದೊರೆಯುವ ಸೇವೆಗಳ ಕುರಿತು ನಮೂನೆಗಳಲ್ಲಿ ಉತ್ತರಿಸುವುದು –10 ನಿಮಿಷಗಳು<br>• ದೊರೆಯುವ ಸೇವೆಗಳ ಕುರಿತು ವಿಷಯ ಮಂಡನೆ –10 ನಿಮಿಷಗಳು |
| **ನಿರೀಕ್ಷಿತ ಫಲಿತಾಂಶ** | ಗ್ರಾಮ ಪಂಚಾಯಿತಿವಾರು ದೊರೆಯುತ್ತಿರುವ ಸೇವೆಗಳು ಮತ್ತು ಜನರು ನಿರೀಕ್ಷಿಸುತ್ತಿರುವ ಸೇವೆಗಳನ್ನು ಪಟ್ಟಿಮಾಡುವರು ಮತ್ತು ವಿಷಯ ಮಂಡಿಸುವರು. |

| **ಅಧಿವೇಶನ– 14** | |
|---|---|
| **ವಿಷಯ** | **ಬಡತನ, ಜೀವನೋಪಾಯ ಮತ್ತು ಕೌಶಲ್ಯಾಭಿವೃದ್ಧಿ** |
| **ಉಪವಿಷಯ** | • ಬಡತನ, ಜೀವನೋಪಾಯ ಮತ್ತು ಕೌಶಲ್ಯಾಭಿವೃದ್ಧಿ– ಪರಿಚಯ<br>• ಜೀವನೋಪಾಯ ಮತ್ತು ಕೌಶಲ್ಯದ ಮೂಲಕ ಬಡತನ ನಿವಾರಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಯತ್ನದ ಪರಿಚಯ<br>• ನಮೂನೆಗಳಲ್ಲಿ ಬಡತನ ನಿವಾರಣಾ ಯೋಜನೆ |
| **ಉದ್ದೇಶ** | ಗ್ರಾಮಗಳನ್ನು ಬಡತನ ಮುಕ್ತವನ್ನಾಗಿಸಲು, ಸರ್ಕಾರದಲ್ಲಿ ಲಭ್ಯವಿರುವ ಜೀವನೋಪಾಯ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆಗಳನ್ನು ವಿವರಿಸುವರು |
| **ಸಮಯ** | **45 ನಿಮಿಷಗಳು** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಬಡತನ ನಿವಾರಣೆ, ಬಡತನ ಕುರಿತು ಪ್ರಶಿಕ್ಷಣಾರ್ಥಿಗಳ ಅಭಿಪ್ರಾಯ ಸಂಗ್ರಹಣೆ<br>• ಬಡತನ, ಜೀವನೋಪಾಯ ಮತ್ತು ಕೌಶಲ್ಯಾಭಿವೃದ್ಧಿಯ ಕುರಿತ ಅನಿಮೇಟೆಡ್ ವಿಡಿಯೋ ವೀಕ್ಷಣೆ |

| | |
|---|---|
| | • ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ಮುದ್ರಿತ ವಿಡಿಯೋ ಪ್ರಸರಣ<br>• ಬಡತನ ನಿವಾರಣೆ, ಜೀವನೋಪಾಯ ಮತ್ತು ಕೌಶಲ್ಯಾಭಿವೃದ್ಧಿ ಕುರಿತು ಗುಂಪುಚರ್ಚೆ –10 ನಿಮಿಷ<br>• ಗುಂಪಿನಲ್ಲಿ ಚರ್ಚಿಸಿದ ವಿಷಯಗಳನ್ನು ನಮೂನೆಗಳಲ್ಲಿ ಅಂತಿಮಗೊಳಿಸುವುದು–10 ನಿಮಿಷ<br>• ವಿಷಯ ಮಂಡನೆ 10 ನಿಮಿಷ |
| **ನಿರೀಕ್ಷಿತ ಫಲಿತಾಂಶ** | ಗ್ರಾಮಗಳ ಬಡತನ ನಿವಾರಣೆಗಾಗಿ ಜೀವನೋಪಾಯ ಒದಗಿಸುವ ಮತ್ತು ಕೌಶಲ್ಯ ಒದಗಿಸುವ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ವಿವಿಧ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಪಟ್ಟಿ ಮಾಡುವರು |

| **ಅಧಿವೇಶನ–15** | |
|---|---|
| **ವಿಷಯ** | **ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಕ್ರೋಢೀಕರಣ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆಯೊಂದಿಗೆ ಸಂಯೋಜನೆ** |
| **ಉಪವಿಷಯ** | • ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆಯ ಕ್ರೋಢೀಕರಣದ ಮಹತ್ವ<br>• ಗ್ರಾಮ ಪಂಚಾಯಿತಿ ಅಭಿವೃದ್ದಿ ಯೋಜನೆಯ ಮಹತ್ವ<br>• ಪಂಚತಂತ್ರ 2.0 ದಲ್ಲಿ ಅಳವಡಿಕೆ<br>• ದೂರದೃಷ್ಟಿ ಯೋಜನೆ ಮತ್ತು ಅಭಿವೃದ್ದಿ ಯೋಜನೆ ಸಿದ್ಧಪಡಿಸುವಿಕೆ ಮತ್ತು ಮಂಡನೆ |
| **ಉದ್ದೇಶ** | ಗ್ರಾಮ ಪಂಚಾಯಿತಿಯ 5 ವರ್ಷಗಳ ಕರಡು ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಿ ಒಂದು ವರ್ಷದ ಅಭಿವೃದ್ಧಿ ಯೋಜನೆಯನ್ನು ಮಂಡಿಸುವರು |
| **ಸಮಯ** | **45 ನಿಮಿಷಗಳು** |
| **ವಿಧಾನ** | ಮುದ್ರಿತ ವಿಡಿಯೋ ಪ್ರಸರಣ ಮತ್ತು ಅನಿಮೇಟೆಡ್ ವಿಡಿಯೋ ವೀಕ್ಷಣೆ |
| **ಪೂರಕ ಸಾಮಗ್ರಿಗಳು** | • ಓದುವ ಸಾಮಗ್ರಿ, ವಿಡಿಯೋ, ಪಿಪಿಟಿ |

| | |
|---|---|
| **ಪ್ರಕ್ರಿಯೆ/ ಸಂಪನ್ಮೂಲ ವ್ಯಕ್ತಿಗಳಿಗೆ ಸೂಚನೆ** | • ಗ್ರಾಮ ಪಂಚಾಯಿತಿ ದೂರದೃಷ್ಟಿ ಮತ್ತು ಅಭಿವೃದ್ಧಿ ಯೋಜನೆ ಕುರಿತು ತಜ್ಞ ಸಂಪನ್ಮೂಲ ವ್ಯಕ್ತಿಗಳಿಂದ ವಿಷಯ ಮಂಡನೆ –10 ನಿಮಿಷ<br>• ಲಭ್ಯವಿರುವ ಎಲ್ಲಾ 8 ವಲಯಗಳ ಮಾಹಿತಿಯನ್ನು ಒಂದೆಡೆ ಕ್ರೋಢಿಕರಿಸುವುದು ಮತ್ತು ಕರಡು ಯೋಜನೆ ಸಿದ್ಧಪಡಿಸುವುದು 10 ನಿಮಿಷ<br>• ಕರಡು ಗ್ರಾಮ ಪಂಚಾಯಿತಿ ಯೋಜನೆಯಲ್ಲಿ ವಾರ್ಷಿಕ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು 15 ನಿಮಿಷಗಳು<br>• ವಿಷಯ ಮಂಡನೆ 10 ನಿಮಿಷಗಳು |
| **ನಿರೀಕ್ಷಿತ ಫಲಿತಾಂಶ** | ಅಧಿವೇಶನದ ಅಂತ್ಯದಲ್ಲಿ ಪ್ರಶಿಕ್ಷಣಾರ್ಥಿಯು ಕರಡು ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಮತ್ತು ಕರಡು ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸಿ ಮಂಡಿಸುವರು. |

ತರಬೇತಿಯ ತಾಂತ್ರಿಕ ಅಧಿವೇಶನಗಳು ಮುಕ್ತಾಯಗೊಂಡ ನಂತರ ತರಬೇತಿಗೆ ಸಂಬಂಧಿಸಿದಂತೆ ನೀಡಿರುವ ಮೌಲ್ಯಮಾಪನ ನಮೂನೆಗಳನ್ನು ನೀಡಿ ಮಾಹಿತಿ ಸಂಗ್ರಹಿಸುವುದು.

ತರಬೇತಿ ಕಾರ್ಯಕ್ರಮದ ಕುರಿತಾಗಿ ಒಂದಿಬ್ಬರು ಪ್ರಶಿಕ್ಷಣಾರ್ಥಿಗಳಿಂದ ಹಿಮ್ಮಾಹಿತಿಯನ್ನು ಪಡೆದುಕೊಳ್ಳುವುದು. ಅಂತಿಮವಾಗಿ ತರಬೇತಿಯಲ್ಲಿ ಭಾಗವಹಿಸಿದ ಎಲ್ಲಾ ಪ್ರಶಿಕ್ಷಣಾರ್ಥಿಗಳಿಗೆ ಧನ್ಯವಾದಗಳನ್ನು ತಿಳಿಸಿ ತರಬೇತಿ ಯಶಸ್ವಿಯಾಗಲು ಸಹಕರಿಸಿದ ಪ್ರತಿಯೊಬ್ಬರು ವಂದಿಸಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸುವುದು.